| |
|---|
| **Deposition Sheets (RP.No.57) Form No.4** |

**IN THE COURT OF II Addl. CIVIL JUDGE & J.M.F.C., KARKALA.**

**Criminal Case No. 573/2020**

**ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 5**

ಸಾಕ್ಷಿದಾರನ ಹೆಸರು : ಸಂತೋಷ್
ತಂದೆಯ ಹೆಸರು : ವಾಸುದೇವ್
ಪ್ರಾಯ : 28 ವರ್ಷ
ಉದ್ಯೋಗ : ಖಾಸಾಗಿ
ವಾಸ : ಸಿದ್ದಾಪುರ, ಶಿರಸಿ

ದಿನಾಂಕ 11-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಆರೋಪಿಯು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪೈಕಿ 2 ನೇ ಆರೋಪಿಯನ್ನು ನೋಡಿ ಗುರುತಿಸಿದ್ದು ಉಳಿದ ಆರೋಪಿತರನ್ನು ಗುರುತಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಾನು 2 ನೇ ಆರೋಪಿಯೊಂದಿಗೆ 2018 ಸಾಲಿನ ಜನವರಿಯಲ್ಲಿ ಒಂದು ತಿಂಗಳು ಕೆಲಸ ಮಾಡಿರುತ್ತೇನೆ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ. ಪೋಲೀಸರು ನನ್ನಲ್ಲಿ ಯವುದೇ ವಿಚಾರಣೆಯನ್ನು ಮಾಡಿರುವುದಿಲ್ಲ ಹಾಗೂ ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರು:-**

ದಿನಾಂಕ 31-07-2019 ರಂದು 2 ನೇ ಆರೋಪಿತರು ಚಾಸಾ-4, 6, 7, 8 ರೊಂದಿಗೆ ಕಬ್ಬಿನಾಲೆ ಗ್ರಾಮದ ಕುಚ್ಚೂರು ವಿನ ಇಂಡು ಎಂಬಲ್ಲಿ ಚಾಸಾ-9 ರವರ ವುನೆಯ ಬಳಿ ಗಾಳಿ ಮಳೆಗೆ ತೆಂರಿನ ಮರವು ಎಲ್ ಟಿ. ಎಲೆಕ್ಟ್ರಿಕಲ್ ವಯರ್ ಮೇಲೆ ಬಿದ್ದ ಕಾರಣ ಒಂದು ಸಿಮೆಂಟ್ ಎಲೆಕ್ಟ್ರಿಕಲ್ ಕಂಬ ಹಾಗೂ 2 ಮರದ ಮರದ ಎಲೆಕ್ಟ್ರಿಕಲ್ ಕಂಬ ತುಂಡಾಗಿ ಬಿದ್ದಿದ್ದು ಅದನ್ನು ಸರಿ ಮಾಡಬೇಕೆಂದು ನಮ್ಮಲ್ಲಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನಾವು ಸದರಿ ಸ್ಥಳಕ್ಕೆ ಹೋಗುತ್ತಿದ್ದಾಗ 1 ನೇ ಆರೋಪಿಯವರು ದಾರಿ ಮಧ್ಯೆ ಸಿಕ್ಕಿದ್ದು ಅವರು ಸದರಿ ಕಂಬ ಬಿದ್ದ ಸ್ಥಳದ ಲೈನ್ ನ್ನು ಆಫ್ ಮಾಡಿರುತ್ತೇನೆ ತಾವುಗಳು ಲೈನ್ ಕೆಲಸ ಮಾಡಬಹುದು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ನಾವು ಅಲ್ಲಿಗೆ ಹೋಗಿ ನೋಡಿದಾಗ ಸಿಮೆಂಟ್ ವಿದ್ಯುತ್ ಕಂಬ ಬುಡದಲ್ಲಿ ತುಂಡಾಗಿ ಅದರ ಬದಿಯಲ್ಲಿ ಇದ್ದ ಅಡಿಕೆ ಮರಕ್ಕೆ ವಾಲಿಕೊಂಡಿದ್ದು, ವಿದ್ಯುತ್ ವಯರ್ ಗಳು ಕಂಬಕ್ಕೆ ಸುತ್ತಿಕೊಂಡಿದ್ದು ಅದರಲ್ಲಿ ಇದ್ದ ಇತರೆ ಎಲ್ ಟಿ ವಯರ್ ಗಳು ಅಲ್ಲಿಯೇ ಇದ್ದ ಅಡಿಕೆ ಮರಗಳ ಮೇಲೆ ಬಿದ್ದು ಕೊಂಡಿದ್ದರಿಂದ ಅದಕ್ಕೆ ಹತ್ತಲು ಆಗದ ಕಾರಣ ಚಾಸಾ-2, 3, 7 ಮತ್ತು ಮೃತ ಗುರುರಾಜ್ ಇವರುಗಳು ಸಿಮೆಂಟ್ ಕಂಬದಲ್ಲಿ ಸಿಕ್ಕಿಕೊಂಡಿದ್ದ ಎಲ್ ಟಸಿ ವಯರ್ ಗಳನ್ನು ತೆಗೆದು ಕಂಬವನ್ನು ನೆಲಕ್ಕೆ ಬೀಳಿಸುವ ಉದ್ದೇಶದಿಂದ ಮಧ್ಯಾಹ್ನ 1.30 ಗಂಟೆಗೆ ನೇತಾಡುತ್ತಿದ್ದ ಎಲ್ ಟಿ ವಿದ್ಯುತ್ ವಯರ್ ನ್ನು ಕೈಯಿಂದ ಹಿಡಿದು ಎಳೆದಾಗ ಕಂಬವು ಅಡಿಕೆ ಮರದಿಂದ ತಪ್ಪಿ ಸ್ವಲ್ಪ ಕೆಳಗೆ ವಾಲಿದ್ದ ಆಗ ಅಡಿಕೆ ಮರದ ಮೆಲಿದ್ದ ಎಲ್ ಟಿ ವಯರ್ ಒಮ್ಮೆಲೇ ನೇರವಾಗಿ ಸುಮಾರು 80 ಮೀಟರ್ ದೂರದಲ್ಲಿ ಹಾದುಹೋಗಿರುವ ವಿದ್ಯುತ್ ಕಂಬದಲ್ಲಿರುವ ಹೈ ಟೆಂಷನ್ ವಯರಿಗೆ ತಾಗಿ ಒಮ್ಮೆಲೇ ಎಲ್ ಟಿ ವಯರ್ ನಲ್ಲಿ ವಿದ್ಯುತ್ ಹರಿದು, ಚಾಸಾ-2, 3, 7 ಮತ್ತು ಮೃತ ಗುರುರಾಜ್ ಇವರುಗಳಿಗೆ ಶಾಕ್ ಹೊಡೆದು ಅವರು ನೆಲಕ್ಕೆ ಬಿದ್ದರು

ನಾವು ಅವರನ್ನು ಆರೈಕೆ ಮಾಡಿದೆವು. ಇದರಿಂದ ಗುರುರಾಜ್ ಅವರ ಕಿಬ್ಬೊಟ್ಟೆ ಹಾಗೂ ಪುಷ್ಟ ದ ಬಳಿ ತೀವ್ರ ಸ್ವರೂಪದ ಸುಟ್ಟ ಗಾಯವಾಗಿದ್ದು, ಎರಡೂ ಕಾಲಿನ ಗಂಟಿನ ಬಳಿ ತರಚಿದ ಗಾಯವಾಗಿತ್ತು. ಚಾಸಾ-2 ಮತ್ತು 3 ರವರಿಗೆ ಸಹ ಗಾಯವಾಗಿತ್ತು. ಚಾಸಾ-4 ಮತ್ತು 7 ರವರಿಗೆ ಯಾವುದೇ ಗಾಯಗಳಾಗಿರುವುದಿಲ್ಲ. ಕೂಡಲೇ ನಾವು ಅವರುಗಳನ್ನು ವಾಹನದಲ್ಲಿ ಚಿಕಿತ್ಸೆಗೆ ಹೆಬ್ರಿ ರಾಘವೇಂದ್ರ ಆಸ್ಪತ್ರೆಗೆ ಕರೆದುಕೊಂಡು ವೈದ್ಯರಿಗೆ ತೋರಿಸಿದಾಗ ವೈದ್ಯರು ಪರೀಕ್ಷಿಸಿ, ಗುರುರಾಜ್ ದಾರಿ ಮಧ್ಯೆ ಮೃತ ಪಟ್ಟಿರುತ್ತಾರೆ ಎಂದು ತಿಳಿಸಿ ಚಾಸಾ-2 ಮತ್ತು 3 ರವರನ್ನು ಒಳರೋಗಿಯಾಗಿ ದಾಖಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಈ ಘಟನೆಗೆ ಆರೋಪಿತರು ಕೆಲಸಗಾರರ ಸುರಕ್ಷತೆಯ ಬಗ್ಗೆ ಯಾವುದೇ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳದೇ ನಿರ್ಲಕ್ಷತನ ತೋರಿಸಿರುವುದು ಈ ಘಟನೆಗೆ ಕಾರಣ ಎಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> ಃ ಆರೋಪಿ ಪರ ಃ ಶ್ರೀ ಬಿ.ಎಸ್.ಎಸ್. ವಕೀಲರಿಂದ ಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ